ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 24/2024**

ಪ್ರ.ವ.ಬೋ.ತಾಃ 24-06-2026

ಚಾಸಾಃ 6 ಫ್ರಾಸಾಃ 5

| | |
|---|---|
| ಸಾಕ್ಷಿಯ ಹೆಸರು | ಸಿದ್ದರಾಜು |
| ತಂದೆ/ಗಂಡನ ಹೆಸರು | ಸಾಕ್ಷಪ್ಪ |
| ವಯಸ್ಸು | 21 ವರ್ಷ |
| ವೃತ್ತಿ | ವಿದ್ಯಾರ್ಥಿ |
| ವಾಸ | ಬೋರಯ್ಯನಹಟ್ಟಿ ಕೊರಟಗೆರೆ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿತರು ಗೊತ್ತು. 1 ನೇ ಆರೋಪಿ ನನ್ನ ಭಾವ, 2 ನೇ ಆರೋಪಿ 1 ನೇ ಆರೋಪಿಯ ತಾಯಿ. ಚಾಸಾ.1 ನನ್ನ ಅಕ್ಕ. ಕಳೆದ 11 ವರ್ಷಗಳ ಹಿಂದೆ ಚಾಸಾ.1 ಮತ್ತು 1 ನೇ ಆರೋಪಿಯು ಪ್ರೀತಿಸಿ ಮದುವೆ ಆಗಿರುತ್ತಾರೆ. ಮದುವೆ ಆದ ನಂತರ ಸುಮಾರು 8 ವರ್ಷಗಳ ಕಾಲ ಜೀವನ ನಡೆಸಿರುತ್ತಾರೆ. ಅವರ ದಾಂಪತ್ಯ ಜೀವನದಿಂದ ಒಂದು ಗಂಡು ಮಗು ಜನಿಸಿರುತ್ತದೆ. ಆನಂತರ ಆರೋಪಿತರು ಚಾಸಾ.1 ರವರಿಗೆ ಹೊಡೆಯುವುದು ಮತ್ತು ಬಡಿಯುವುದು ಮಾಡುತ್ತಿದ್ದರು. ದಿಃ 10.09.2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಆರೋಪಿತರು ಚಾಸಾ.1 ರವರ ಜೊತೆ ಜಗಳ ತೆಗೆದು ದೊಣ್ಣೆಯಿಂದ, ಕುಡುಗೋಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನನಗೆ ಫೋನ್ ಮೂಲಕ ತಿಳಿಸಿದರು.

ಆನಂತರ ಚಾಸಾ.1ರವರು ಆ ರಾತ್ರಿ ಚಾಸಾ.7ರವರ ಮನೆಯಲ್ಲಿಯೇ ಇದ್ದರು. ಮಾರನೇ ದಿನ ನಾವು ಹೋಗಿ ನೋಡಲಾಗಿ ಚಾಸಾ.1ರವರ ಕೈ ಕಾಲುಗಳಿಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಆನಂತರ ಚಾಸಾ.1ರವರನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದೆವು. ಆನಂತರ ಚಾಸಾ.1ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋದೆವು. ಈ ಬಗ್ಗೆ ಚಾಸಾ.1ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ಈ ಸಂಬಂಧವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u>- ಆರೋಪಿತರ ಪರವಾಗಿ ಶ್ರೀ. ಎಂ.ಹೆಚ್.ಆರ್.ವಕೀಲರಿಂದಃ-**

ಚಾಸಾ.1ರವರು 1ನೇ ಆರೋಪಿಯನ್ನು ನಮಗೆ ಇಷ್ಟ ಇಲ್ಲದೆ ಇದ್ದರೂ ಸಹ ಹ ಹೋಗಿ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದದಿಃ 10.09.2023 ರಂದು ಗಲಾಟೆ ಆಗಿರುತ್ತದೆ. ಚಾಸಾ.1ರವರು ರಾತ್ರಿ 9.30 ಗಂಟೆಗೆ ಫೋನ್ ಮುಲಕ ನನಗೆ ವಿಚಾರ ತಿಳಿಸಿದರು. ನಮ್ಮ ಊರಿನಿಂದ ಆರೋಪಿತರ ಊರು ಸುಮಾರು 30 ಕಿ.ಮೀ. ದೂರದಲ್ಲಿದೆ. ಆ ದಿನ ನಮಗೆ ವಾಹನ ಸೌಕರ್ಯ ಇಲ್ಲದೇ ಇರುವುದರಿಂದ ಆರೋಪಿತರ ಮನೆಗೆ ಬರಲು ಆಗಿರುವುದಿಲ್ಲ. ಆ ದಿನ ಯಾವುದೇ ಗಲಾಟೆ ಆಗದೇ ಇರುವುದರಿಂದ ನಾವು ಆ ದಿನ ಆರೋಪಿತರ ಮನೆಯ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ದಿಃ 11.09.2023 ರಂದು ಚಾಸಾ.1ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ಚಾಸಾ.1ರವರು 1ನೇ ಆರೋಪಿಗೆ ಹೇಳದೇ ಕೇಳದೇ ಆಗಿಂದಾಗ್ಗೆ ನಮ್ಮ ಮನೆಗೆ

ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು, ನಾವು ಫೋನ್ ಮೂಲಕ 1 ನೇ ಆರೋಪಿಗೆ ಚಾಸಾ.1 ರವರನ್ನು ಕಳುಹಿಸುವಂತೆ ಹೇಳಿದ ಸಮಯದಲ್ಲಿ ಕಳುಹಿಸುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. ಚಾಸಾ.1 ರವರು ನಮ್ಮ ಮನೆಗೆ ಬಂದ ನಂತರ ಸರಿಯಾಗಿ ವಾಪಸ್ಸು ಆರೋಪಿತರ ಮನೆಗೆ ಹೋಗುತ್ತಿರಲಿಲ್ಲ ಎಂದರೆ, ಸಾಕ್ಷಿಯು, ಅವರು ಚೆನ್ನಾಗಿ ನೋಡಿಕೊಳ್ಳದೇ ಇರುವ ಕಾರಣ ಹೋಗುತ್ತಿರಲಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಚಾಸಾ.1 ರವರು ಆರೋಪಿತರ ಮನೆಗೆ ಹೋಗದೇ ಇದ್ದ ಸಮಯದಲ್ಲಿ ಆರೋಪಿತರು ಪಂಚಾಯಿತಿದಾರರ ಮೂಲಕ ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸರಿ. 1 ನೇ ಆರೋಪಿ ಮತ್ತು ಚಾಸಾ.1 ರವರು ಪ್ರೀತಿಸಿ ಮದುವೆ ಆಗಿರುವುದು ನಮಗೆ ಇಷ್ಟವಿಲ್ಲದೇ ಇರುವ ಕಾರಣ ಆರೋಪಿತರ ವಿರುದ್ಧ ಚಾಸಾ.1 ರವರ ಮೂಾಲಕ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ 8 ವರ್ಷಗಳಿಂದಲೂಾ ಸಹ ಆರೋಪಿತರು ಚಾಸಾ.1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ